# ಕನ್ನಡ - ಅಧ್ಯಾಪಕ ಪಠ್ಯ
# KANNADA - TEACHER TEXT

## ಮುಂದುವರಿದ ಪಠ್ಯ
## ADVANCED TEXT

## ತರಗತಿ

## III

ಕೇರಳ ಸರಕಾರ
ಸಾರ್ವಜನಿಕ ಶಿಕ್ಷಣ ಇಲಾಖೆ

ತಯಾರಿಸಿದವರು:
**ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಮಿತಿ (SCERT)**
ವಿದ್ಯಾಭವನ ಪೂಜಪುರ, ತಿರುವನಂತಪುರ - 695 012

2024

## ಘಟಕ 1

# ಹಸಿರಿನ ಸಿರಿ

**ಮುನ್ನುಡಿ :**

ಪ್ರಕೃತಿಯು ನಮ್ಮ ಜೀವನದ ಅವಿಭಾಜ್ಯ ಅಂಗವಾಗಿದೆ. ಹಸುರಿನಿಂದ ಕಂಗೊಳಿಸುವ ಗಿಡಮರಗಳು, ಗುಡ್ಡ ಬೆಟ್ಟಗಳು,ತಂಗಾಳಿಯ ತಂಪು ಹರಿಯುವ ನೀರಿನ ಜುಳು ಜುಳು ನಿನಾದ ಹಕ್ಕಿಗಳ ಚಿಲಿಪಿಲಿ ಕಲರವ ಇವೆಲ್ಲವೂ ನಮ್ಮ ಮನಸನ್ನು ಸೂರೆಗೊಳ್ಳುತ್ತದೆ.

ಇಂತಹ ಪ್ರಕೃತಿಯ ಸೌಂದರ್ಯವನ್ನು ಸವಿಯಲು, ಸಂರಕ್ಷಿಸಿ ಮುಂದಿನ ಪೀಳಿಗೆಗೆ ಹಸ್ತಾಂತರಿಸಲು ಮಕ್ಕಳನ್ನು ಪ್ರೇರೇಪಿಸುವುದು ಈ ಘಟಕದ ಉದ್ದೇಶವಾಗಿದೆ.

ಪಳಕಳ ಸೀತಾರಾಮ ಭಟ್ಟ ಇವರು ರಚಿಸಿದ ಕಾದನುಳಿಸಿ ಬೆಳೆಸುವ ಎಂಬ ಪದ್ಯದಲ್ಲಿ ಗಿಡಮರಗಳನ್ನು ಬೆಳೆಸಿ ಅವುಗಳನ್ನು ಸಂರಕ್ಷಿಸುವ ಮತ್ತು ಪರಸ್ಪರ ಅವಲಂಬಿಸಿಕೊಂಡು ಬದುಕುವ ಜೀವಿಗಳ ವೈಶಿಷ್ಟ್ಯಗಳನ್ನು ಬಹಳ ಸೊಗಸಾಗಿ ಸರಳವಾಗಿ ಈ ಪದ್ಯದಲ್ಲಿ ಚಿತ್ರಿಸಲಾಗಿದೆ.

ಈ ಘಟಕದ ಎರಡನೇ ಪಾಠ ಸಹಜೀವನ ಇದೊಂದು ಕಥೆಯಾಗಿದೆ. ತೋಟದ ಮಾಲಕ, ಮಾವೀನ ಮರ , ಮತ್ತು ಮಕ್ಕಳು ಇವರೊಳಗಿನ ಬಾಂಧವ್ಯ, ತೋಟದ ಮಾಲೀಕನ ಸ್ವಾರ್ಥ ಮನೋಭಾವ ನಿಷ್ಕಳಂಕ ಮಕ್ಕಳು ಮತ್ತು ಮಾವಿನ ಮರ ದ ದುಃಖ ಮಕ್ಕಳ ಸಂಪರ್ಕವಿಲ್ಲದೆ ಸೊರಗಿದ ಮಾವಿನ ಮರವು ಮಕ್ಕಳ ಪುನರಾಗಮನ ದೊಂದಿಗೆ ಸಂತೋಷಗೊಂಡ ಮರದ ಚಿತ್ರಣ, ಇವು ಮನುಷ್ಯ ಮತ್ತು ಪ್ರಕೃತಿಯ ಸಂಬಂಧವನ್ನು ಸಾರುತ್ತದೆ.

# ಸಿಲೆಬಸ್ ಗ್ರಿಡ್

| | | |
|---|---|---|
| ಪಾಠ | : | ಪರಿಸರ |
| ಉಪ ಆಶಯಗಳು | : | ಸಹಜೀವನ ಜೀವ ವೈವಿಧ್ಯ ಪರಿಸರಸಂರಕ್ಷಣ. |
| ಸಾಹಿತ್ಯ ಪ್ರಕಾರಗಳು | : | ಪದ್ಯ, ಕಥೆ |
| ಕಲಿಕಾ ಉದ್ದೇಶಗಳು | : | ಕಥೆ ಕವಿತೆಗಳ ಮೂಲಕ ಸಹಜೀವನ ಜೀವ ವೈವಿಧ್ಯ ಪರಿಸರ ಸಂರಕ್ಷಣೆ ಇತ್ಯಾದಿಗಳ ಆಶಯಗಳನ್ನು ತಿಳಿಯುವುದು. ಕನ್ನಡ ವರ್ಣಮಾಲೆ ಕಾ ಗುಣಿತಾಕ್ಷರಗ ಗಳು , ಉಚ್ಚಾರ ಶುದ್ಧಿ ಯೊಂದಿಗೆ ಓದು. ಬರವಣಿಗೆ ಮಾತುಗಾರಿಕೆ ಇತ್ಯಾದಿಗಳನ್ನು ಖಾತರಿ ಪಡಿಸುವುದು. |
| ಆಶಯ /ತಿಳುವಳಿಕೆ | : | ಪರಿಸರ ಸಂರಕ್ಷಣೆ ಯಲ್ಲಿ ಪ್ರಾಧಾನ್ಯತೆಯನ್ನು ತಿಳಿದುಕೊಳ್ಳುವುದು |
| ಭಾಷಾ ಸಾಮರ್ಥ್ಯಗಳು/ ನೈಪುಣ್ಯಗಳು | : | ಓದುವುದು ಬರವಣಿಗೆ |
| ಮೌಲ್ಯಗಳು /ಮನೋಭಾವಗಳು | : | ಪ್ರಕೃತಿ ಪ್ರೇಮ, ಪರಿಸರ ಸಂರಕ್ಷಣೆ |
| ಭಾಷಾ ವ್ಯವಹಾರ ರೂಪಗಳು | : | ಪದ್ಯ, ಕಥೆ |

## ಕಲಿಕಾ ಉದ್ದೇಶಗಳು:

- ಪದ್ಯವನ್ನು ಆಶಯಗ್ರಹಣದೊಂದಿಗೆ ಓದಿ, ಆಲಿಸಿ ಆಸ್ವಾದಿಸುವುದು.
- ಅಪರಿಚಿತ ಪದಗಳ ಅರ್ಥ ಮತ್ತು ಅವುಗಳ ಪ್ರಯೋಗಗಳನ್ನು ತಿಳಿಯುವುದು.
- ಪದ್ಯದಲ್ಲಿ ಬರುವ ಪ್ರಾಸಪದಗಳನ್ನು ಗುರುತಿಸಲು ಸಾಧ್ಯವಾಗುವುದು.
- ಪದ್ಯಪನ್ನು ರಾಗ, ತಾಳ, ಭಾವದೊಂದಿಗೆ ಹಾಡಿ ಆನಂದಿಸುವುದು.
- ಸಮಾನವಾದ ರಾಗ, ತಾಳಗಳಿರುವ ಪದ್ಯವನ್ನು ಸಂಗ್ರಹಿಸಿ ಹಾಡಿ ಆನಂದಿಸುವುದು.
- ಉಚ್ಛಾರಶುದ್ಧಿಯೊಂದಿಗೆ ಯುಕ್ತವಾದ ಭಾವದೊಂದಿಗೆ ನಿರರ್ಗಳವಾಗಿ ಓದಿ ಮಂಡಿಸುವುದು.
- ಹಾಡುವಿಕೆಯನ್ನು ಉತ್ತಮಗೊಳಿಸಲು ಬೇಕಾದ ಮೌಲ್ಯಮಾಪನ ಸೂಚಕಗಳನ್ನು ಅಧ್ಯಪಕರ ಸಹಾಯದೊಂದಿಗೆ ತಯಾರಿಸುವುದು, ಹಾಡನ್ನು ಮಂಡಿಸಿ ಸ್ವತಃ ಮತ್ತು ಪರಸ್ಪರ ಮೌಲ್ಯಮಾಪನ ಮಾಡುವುದು.
- ಕತೆಯನ್ನು ಆಶಯಗ್ರಹಣದೊಂದಿಗೆ ಓದಿ ಆಸ್ವಾದಿಸುವುದು.
- ಕತೆಯಲ್ಲಿಬರುವ ಪದಗಳಿಗೆ ಸಮಾನಾರ್ಥ ಪದ, ಪದವಿಂಗಡಣೆ, ವಿಶೇಷಣಾ ಪದಗಳು ಎಂಬಿವುಗಳನ್ನು ಕಂಡು ಹಿಡಿಯುವುದು.
- ಕತೆಯನ್ನು ಹಾವ ಭಾವ, ಉಚ್ಛಾರ ಶುದ್ಧಿ, ಸ್ವರ ಭಾರ ಎಂಬಿವುಗಳೊಂದಿಗೆ ಓದಿ ಮಂಡಿಸುವುದು.
- ಚಿತ್ರಗಳ ಆಶಯವನ್ನು ತಿಳಿದು ಕ್ರಮೀಕರಿಸುವುದು ಮತ್ತು ಬರವಣಿಗೆಯ ರೂಪದಲ್ಲಿ ಪ್ರಕಟಪಡಿಸುವುದು.
- ಸೃಜನಾತ್ಮಕ ರಚನೆಯಲ್ಲಿ ತೊಡಗುವುದು.
- ಪದ್ಯ, ಕತೆ ಓದಿ ಆಸ್ವಾದಿಸುವುದರೊಂದಿಗೆ ಪ್ರಕೃತಿ ಸಂರಕ್ಷಣೆಯ ಪ್ರಾಧಾನ್ಯತೆಯನ್ನು ತಿಳಿಯುವುದು.

| ಕಲಿಕಾ ಉದ್ದೇಶಗಳು | | | | ಭಾಷಾ ಸತ್ಯಾಂಶಗಳು | ಭಾಷಾ ವ್ಯವಹಾರ ರೂಪಗಳು | ಕಲಿಕೋಪಕರಣಗಳು | ಮೌಲ್ಯಮಾಪನ |
|---|---|---|---|---|---|---|---|
| ಪಾಠದ ಹೆಸರು | ಆಶಯ / ತಿಳುವಳಿಕೆಗಳು | ಭಾಷಾ ಸಾಮರ್ಥ್ಯಗಳು | ಮೌಲ್ಯಗಳು/ ಮನೋಭಾವಗಳು. | | | | |
| 1. ಪರಿಸರ | ● ಪದ್ಯಗಳ ಆಸ್ವಾದನೆಗೆ ರಾಗ, ತಾಳಗಳು ಅಗತ್ಯವಿದೆ.<br>● ಪ್ರಾಸ ಪದಗಳು ಪದ್ಯದ ಸೌಂದರ್ಯವನ್ನು ಹೆಚ್ಚಿಸುವುದು.<br>● ಕತೆಯಲ್ಲಿ ಬರುವ ಪದ ವಿಂಗಡಣೆ ಮತ್ತು ಜೋಡಣೆ ವಿಶೇಷವಾಗಿ ಪದಗಳು ಕತೆಯ ಆಸ್ವಾದನೆಗೆ ಸಹಾಯಕರವಾಗಿದೆ.<br>● ಚಿತ್ರಗಳು ಆಶಯಗ್ರಹಣಕ್ಕೆ ಪೂರಕವಾಗಿದೆ.<br>● ಪ್ರಕೃತಿಯ ಉಳಿವಿಗೆ ಪರಿಸರ ಸಂರಕ್ಷಣೆಯ ಅಗತ್ಯವಿದೆ. | ● ಪದ್ಯಗಳನ್ನು ರಾಗ, ತಾಳದೊಂದಿಗೆ ಹಾಡುವುದು.<br>● ಕತೆಯನ್ನು ಭಾವಪೂರ್ಣವಾಗಿ ಮಂಡಿಸುವುದು. (ಸ್ವರಭಾವ) | ● ಜಲಮೂಲಗಳನ್ನು ಸಂರಕ್ಷಿಸುವ ಮನೋಭಾವ<br>● ಅರಣ್ಯ ಸಂರಕ್ಷಣೆಯ ಮನೋಭಾವ<br>● ಕಾಡುಪ್ರಾಣಿಗಳನ್ನು ಸಂರಕ್ಷಿಸುವ ಮನೋಭಾವ ಬೆಳೆಸುವುದು.<br>● ಸಾಹಿತ್ಯಕೃತಿಗಳನ್ನು ಓದಿ ಆಸ್ವಾದಿಸುವ ಮನೋಭಾವ ಬೆಳೆಸುವುದು.<br>● ಪ್ರಕೃತಿಯನ್ನು ವೀಕ್ಷಿಸುವ ಮತ್ತು ಆಸ್ವಾದಿಸುವ ಮನೋಭಾವ ಬೆಳೆಸುವುದು. | ● ಪರಿಸರ ಸಂರಕ್ಷಣೆ ಚಟುವಟಿಕೆಗಳಲ್ಲಿ ತೊಡಗಿಸಿ ಕೊಳ್ಳುವುದು. | ● ಪದ್ಯ<br>● ಕತೆ<br>● ಚಿತ್ರಕಥೆ<br>● ಘೋಷಣಾ ವಾಕ್ಯ | ● ಕಾದಂಬರಿ<br>● ಕವನ ಸಂಕಲನ<br>● ವಿಡಿಯೋಗಳು<br>● ಹಾಡಿನ ಆಡಿಯೋ | ● ಹಾಡುವಿಕೆ (ರಾಗ, ತಾಳ, ಉಚ್ಚಾರ, ಗುಂಪಿನಲ್ಲಿ ಭಾಗವಹಿಸುವಿಕೆ)<br>● ಕತೆ ಓದುವುದು. (ಸ್ವರ ಭಾರ, ನಿರರ್ಗಳತೆ, ಹಾವಭಾವ)<br>● ಚಿತ್ರ ಕಥೆ (ಆಶಯ, ಭಾಷಾ ಪ್ರಯೋಗ, ಘಟನೆಗಳ ಕ್ರಮೀಕರಣ)<br>● ಘೋಷಣಾ ವಾಕ್ಯ (ಆಶಯ, ಪ್ರಾಸ ಬದ್ಧ) |

**ಚಟುವಟಿಕೆಗಳು:**

ಪ್ರವೇಶ ಚಟುವಟಿಕೆ

TB ಚಿತ್ರಗಳ ಕುರಿತಾದ ಚರ್ಚೆ

ಬಣ್ಣ ಹಚ್ಚುವುದು , ಜೀವಿಗಳ ಹೆಸರು ಬರೆಯುವುದು.

ಕಾಡನುಳಿಸಿ ಬೆಳೆಸುವ

ಪ್ರಕೃತಿಗೆ ಸಂಭಂದಿಸಿದ ವಿಡಿಯೋ ಪ್ರದರ್ಶನ

ವೀಕ್ಷಿಸಿದ ವಿಡಿಯೋದ ಬಗ್ಗೆ ಚರ್ಚೆ

**ಚರ್ಚಾ ಸೂಚಕಗಳು :**

ಈ ದೃಶ್ಯ ಇಷ್ಟವಾಯಿತೇ, ವಿಡಿಯೋದಲ್ಲಿ ನೋಡಿದ ದೃಶ್ಯಗಳು ಯಾವುವು?

ಇದರಲ್ಲಿ ನಿಮಗೆ ಯಾವ ಯಾವ ಮರಗಳ ಬಗ್ಗೆ ತಿಳಿದಿದೆ, ಯಾವ ಯಾವ ಪಕ್ಷಿಗಳ ಕುರಿತು ಗೊತ್ತಿದೆ?

ಪದ್ಯವನ್ನು ವೈಯಕ್ತಿಕವಾಗಿ ಓದುದುವುದು. ಕೆಲವರಿಗೆ ಓದಲು ಅವಕಾಶ ನೀಡುವುದು. ಗುಂಪಿನಲ್ಲಿ ಓದುವುದು/ ಹಾಡುವುದು. ಅಧ್ಯಾಪಕರ ಮಾದರಿ ಓದು.

ಕವಿತೆಯನ್ನು ಗುಂಪಿನಲ್ಲಿ ಹಾಡುವುದು.

ಹಾಡುಗಾರಿಕೆಯ ಮೌಲ್ಯಮಾಪನ

ರಾಗ ತಾಳ ಭಾವ ದೊಂದಿಗೆ ಹಾಡುವುದು

ಎಲ್ಲರ ಭಾಗವಹಿಸುವಿಕೆ

ಉಚ್ಚಾರ ಸ್ಪಷ್ಟತೆಯೋಂದಿಗೆ ಗಟ್ಟಿಯಾಗಿ ಹಾಡುವುದು.

**ಪ್ರಾಸಪದ:**

ಮರಗಳ - ವರಗಳ, ನೇಗಿಲು - ಬಾಗಿಲು, ಚಂದನ - ನಂದನ, ಕಾನನ - ಗಾಯನ, ಕಾಡಲಿ - ನಾಡಲಿ, ಸಾಗರ- ಚೆಲುವಿ ನಾಗರ, ಮಂದಿರ - ಸುಂದರ

**ಚರ್ಚಿಸೋಣ : ಪಠ್ಯ ಪುಸ್ತಕ**

ಅಧ್ಯಾಪಕರು ಮತ್ತು ಮಕ್ಕಳು ವಿಷಯಕ್ಕೆ ಸಂಬಂಧಿಸಿ ಚರ್ಚಿಸುವುದು

ಎಲ್ಲಾ ಮಕ್ಕಳ  ಭಾಗವಹಿಸುವಿಕೆಯನ್ನು ಖಾತರಿ ಪಡಿಸುವುದು  ಕ್ರೋಡೀಕರಣ.

**ಪದ ಸೂರ್ಯ**

ವೈಯಕ್ತಿಕವಾಗಿ ಪದ ಸೂರ್ಯ ವನ್ನು ಪೂರ್ತಿಗೊಳಿಸುವುದು , ಮಂಡನೆ, ಅಧ್ಯಾಪಕ ಮಾದರಿ

(ಶುದ್ಧ ಗಾಳಿ, ಪ್ರಾಣಿಗಳು, ಪಕ್ಷಿಗಳು, ಹಣ್ಣುಗಳು, ವಾಸಸ್ಥಳ, ಹಳ್ಳ ನದಿ, ತೋಡು, ಝರಿ)

**ಟಿಪ್ಪಣಿ :  ಪ್ರಕೃತಿಯ ಹಂತಗಳು**

ಪದ ಸೂರ್ಯದ ಆಧಾರದಲ್ಲಿ ಟಿಪ್ಪಣಿಯನ್ನು ವೈಯಕ್ತಿಕವಾಗಿ ರಚಿಸುವುದು.

ವೈಯಕ್ತಿಕ ಮಂಡನೆ

ಗುಂಪಿನಲ್ಲಿ ಉತ್ತಮ ಪಡಿಸುವುದು

ಗುಂಪಿನ ಮಂಡನ ಉತ್ತಮ ವಾದುದನ್ನು ಅಭಿನಂದಿಸುವುದು.

ಯಾವುದಾರೊಂದು ಗುಂಪಿನ ಉತ್ಪನ್ನವನ್ನು ತಿದ್ದುಪಡಿಗೆ ಒಳಪಡಿಸುವುದು

(ಮಕ್ಕಳ ಸಹಾಯದೊಂದಿಗೆ)

ಅಧ್ಯಾಪಕ ಮಾದರಿ ಮಂಡನೆ

**ಪದ್ಯ ಪೂರ್ತಿಗೊಳಿಸಿರಿ**

ಹೂಗಳ ಕಂಪು

ಗಾಳಿಯ ತಂಪು

ಕೋಗಿಲೆ ದನಿ ಬಲು ಇಂಪು ..........

..........,....................

................,...................

...................................

ತೆಂಗಿನ ಸಾಲು

ಚಾಚಿದ ಬಯಲು ಕಂಗಿನ ಸಾಲು

ಹಬ್ಬಿದೆ ನೆರಳು

**ಚಿತ್ರ ರಚಿಸುವ**

ಪರಿಸರಕ್ಕೆ ಸಂಬಂಧಿಸಿದ ಚರ್ಚೆಯಿಂದ ಚಿತ್ರ ರಚನೆಗೆ ಮಕ್ಕಳನ್ನು ಅಣಿಗೊಳಿಸಬೇಕು. ಪರಿಸರಕ್ಕೆ ಸಂಬಂಧಿಸಿದ ಚಿತ್ರ ಬಿಡಿಸಿ ಬಣ್ಣ ಹಚ್ಚಲಿ.

ಕುಮಾರತುಂಗನು ಸಿಂಗಾಪುರ ರಾಜ್ಯದ ರಾಜನಾಗಿದ್ದನು. ಅವನಿಗೆ ತನ್ನ ಪ್ರಜೆಗಳ ಮೇಲೆ ಅಪಾರ ಪ್ರೀತಿ. ಪ್ರಜೆಗಳ ಯೋಗ ಕ್ಷೇಮ ವಿಚಾರಿಸಲು ಆಗಾಗ ತನ್ನ ರಾಜ್ಯದಲ್ಲಿ ಗಸ್ತು ತಿರುಗುತ್ತಿದ್ದನು.ತಿರುಗಾಡಿತ್ತಿದ್ದನು. ಒಂದು ಬಾರಿ ರಾಜನು ತನ್ನ ಕುದುರೆಯಲ್ಲಿ ಸವಾರಿ ಹೊರಟಿ ದ್ದನು . ದೂರದಲ್ಲಿ ಒಬ್ಬ ಮುದುಕ ಏನೋ ಕೆಲಸ ಮಾಡುತ್ತಿರುವುದನ್ನು ಕಂಡನು. ಅವನು ತುಂಬಾ ಬದಕಲಾಗಿದ್ದನು. ಆದರೂ ಬಹಳ ಆಸಕ್ತಿಯಿಂದ ಕೆಲವು ಹಣ್ಣಿನ ಗಿಡಗಳನ್ನು ನೆಡುತ್ತಿದ್ದನು. ಇದನ್ನು ನೋಡಿದ ರಾಜನು ಮುದುಕನ ಹತ್ತಿರ ತೆರಳಿ "ಅಜ್ಜ ಈ ಇಳಿಯ ವಯಸ್ಸಿನಲ್ಲಿಯೂ ಗಿಡಗಳನ್ನು ನೆದುತ್ತಿರುವೆಯೆಲ್ಲಾ? ಈ ಗಿಡಗಳು ಬೆಳೆದು ಮರವಾಗಿ ಹಣ್ಣುಗಳನ್ನು ನೀಡಲು ಅದೆಷ್ಟೋ ವರ್ಷಗಳು ಬೇಕಾಗಬಹುದು? ಅಲ್ಲಿಯ ತನಕ ನೀನು ಬದುಕಿರುವೆಯಾ? ಎಂದನು. ಆಗ ಮುದುಕನು ತಾಳ್ಮೆಯಿಂದ " ಸ್ವಾಮೀ ತಮ್ಮ ತೋಟದ ಹಣ್ಣುಗಳನ್ನು ತಾವು ತಿನ್ನುತ್ತೀರಿ ಆ ಹಣ್ಣಿನ ಮರಗಳನ್ನು ನೆಟ್ಟವರು ಯಾರು? ಗೊತ್ತಿದೆಯೆ ತಮಗೆ? "" "ನನ್ನ ಹಿರಿಯರು ನೆಟ್ಟಿರಬಹುದು" ರಾಜನು ಉತ್ತರಿಸಿದನು.

ಆಗ ಮುದುಕನು ತುಂಬಾ ವರ್ಷಗಳ ಹಿಂದೆ ನಮ್ಮ ಹಿರಿಯರು ನೆಟ್ಟ ಮರಗಳ ಫಲಗಳನ್ನು ನಾವು ತಿನ್ನುತ್ತಿದ್ದೇವೆ ಅವುಗಳ ನೆರಳಿನ ತಂಪನ್ನು ಅನುಭವಿಸುತ್ತಿದ್ದೇವೆ. ಹಾಗೆಯೇ ನಾನು ನನಗಾಗಿ ಈ ಗಿಡವನ್ನು ನೆಡುತ್ತಿಲ್ಲ. ನನ್ನ ಮಕ್ಕಳು , ಮೊಮ್ಮಕ್ಕಳು ಮತ್ತು ಊರಿನವರಿಗಾಗಿ ನೆಡುತ್ತಿದ್ದೇನೆ. ಫಲ ಬಿಡಲಿ , ಹಣ್ಣುಗಳನ್ನು ಕೊಡಲಿ ಆಗ ನನ್ನ ಶ್ರಮ ಸಾರ್ಥಕವಾಗುವುದು. ಮುದುಕನ ಅನುಭವದ ಬುದ್ಧಿವಂತಿಕೆಯ ಮಾತುಗಳನ್ನು ಕೇಳಿ ರಾಜನಿಗೆ ಬಹಳ ಸಂತೋಷವಾಯಿತು. ರಾಜ ಅವನಿಗೆ ಕೃತಜ್ಞತೆ ಸಲ್ಲಿಸಿ ಬಂಗಾರದ ನಾಣ್ಯಗಳನ್ನು ನೀಡಿ ಅವನನ್ನು ಗೌರವಿಸಿದನು.

ತರಗತಿಯಲ್ಲಿ ಅಧ್ಯಾಪಕರು ಕತೆಯನ್ನು ಹೇಳುವರು.

ಪಾಠದ ಕಡೆಗೆ

ಚಿತ್ರ ಓದು T B 11

ಚಿತ್ರದಲ್ಲಿ ಏನೇನಿದೆ?

ಯಾವೆಲ್ಲಾ ಮರಗಳಿವೆ?

ನಿಮ್ಮ ಮನೆಯಲ್ಲಿ ಇಂತಹ ಮರಾಗಳಿವೆಯೆ?

ಯಾವೆಲ್ಲಾ ಹಣ್ಣಿನ ಮರಗಳಿವೆ?

ಕತೆಯನ್ನು ವೈಯಕ್ತಿಕವಾಗಿ ಓದುವುದು.

ಆಶಯ ಗ್ರಹಣ ಪ್ರಶ್ನೆಗಳನ್ನು ಕೇಳುವುದು.

ತೋಟದ ಮಾಲೀಕನ  ಹೆಸರೇನು?

ತೋಟದಲ್ಲಿ ಯಾವೆಲ್ಲಾ ಮರಗಳಿದ್ದವು?

ಮಾವಿನ ಮರವನ್ನು ಎಲ್ಲರೂ ಯಾಕೆ  ಇಷ್ಟಪಡುತ್ತಿದ್ದರು.?

ಮಾದಪ್ಪನು ಸ್ಥಾಪಿಸಿದ ಸೂಚನಾ ಫಲಕದಲ್ಲಿ ಏನೆಂದು ಬರೆದಿತ್ತು?

ವರ್ಷಗಳು ಕಳೆದರೂ ಮಾವಿನ ಮರ ಹೂ  ಬಿಡದಿರಲು ಕಾರಣವೇನು?

ಮಾದಪ್ಪನು ತನ್ನ ತಪ್ಪಿನ ಅರಿವಾದಾಗ ಏನು ಮಾಡಿದನು?

ಗುಂಪಿನಲ್ಲಿ ಪಾಠ ಭಾಗವನ್ನು ಓದುವುದು

ಗಟ್ಟಿ ಓದು

ಅಧ್ಯಾಪಕರ ಮಾದರಿ ಓದು

## ಓದಿನ ಚಟುವಟಿಕೆಗಳು

ಸಾಲು ಗುರುತಿಸುವುದು ಹುಡುಕುವುದು

ಒತ್ತಕ್ಷರ ಹುಡುಕುವುದು

ಮಾರ್ಧನಿ ಓದು ( ಅಧ್ಯಾಪಕರು ನಿರ್ದಿಷ್ಟ ಪಾಠ ಭಾಗವನ್ನು ಕೆಲವು ಪದಗಳನ್ನು ತಪ್ಪಾಗಿ ಓದುವುದು. ಮಕ್ಕಳು ಗುರುತಿಸಿ ಸರಿಪಡಿಸಿ ಹೇಳುವುದು. ಪುಸ್ತಕ ತೆ ರೆಯಬಾರದು.

ಕತೆಯನ್ನು ಬಾಯ್ದೇರೆಯಾಗಿ ಹೇಳುವುದು.

ಕತೆಯ ಅಭಿನಯ (ಗುಂಪಿ ನಲ್ಲಿ)

ಪದಗಳನ್ನು ಸರಿಪಡಿಸುವುದು. ಪಠ್ಯ ಪುಸ್ತಕ

ಸಮಾನರ್ಥ ಕ ಪದಗಳನ್ನು ಹುಡುಕಿ ಬರೆಯಿರಿ

ಜೋಡಿಸಿ ಬರೆಯಿರಿ

ಉತ್ತರಿಸಿರಿ

ಪ್ರಕ್ರಿಯೆ

ವೈಕ್ತಿಕವಾಗಿ ಉತ್ತರಿಸುವುದು

ಮಂಡಿಸುವುದು

ಗುಂಪಿನಲ್ಲಿ ಸರಿಪಡಿಸುವುದು

ಮಂಡನೆ

ಅಧ್ಯಾಪಕರ ಮಾದರಿ

## ಪದಗಳನ್ನು ಕ್ರಮೀಕರಿಸಿ ವಾಕ್ಯ ರಚಿಸಿರಿ

ಆಶ್ರಯಿಸಿದ್ದವು/ ಪ್ರಾಣಿಪಕ್ಷಿಗಳು /ಮರವನ್ನು/ಈ

ಮಾವಿನಮರವು/ ಇವುಗಳಲ್ಲಿ/ ಬೆಳೆದಿತ್ತು/ ವಿಶಾಲವಾಗಿ

ತೋಟಕ್ಕೆ/ಮಕ್ಕಳನ್ನು/ಆಹ್ವಾನಿಸಿ ದವು/ ಹಳ್ಳಿಯ

## ಯೋಚಿಸುವ ಬರೆಯುವ

ಮಾಡಪ್ಪನು ಮಕ್ಕಳನ್ನು ಪುನಃ ತೋಟಕ್ಕೆ ಆಹ್ವಾನಿಸದೆ ಇರುತ್ತಿದ್ದರೆ ಏನಾಗುತ್ತಿತ್ತು?

## ಚಿತ್ರ ಕತೆ

ಚಿತ್ರ ನೋಡಿ ಕತೆ ಬರೆಯಿರಿ, ಶೀರ್ಷಿಕೆ ನೀಡಿರಿ

ಚಿತ್ರ ಓದು (ಆಶಯ ಗ್ರಹಣ ಪ್ರಶ್ನೆಗಳನ್ನು ಕೇಳುವುದು)

ಕಥೆ ಬರೆಯುವುದು (ವೈಯಕ್ತಿಕ)ಮಂಡನೆ

ಗುಂಪಿನಲ್ಲಿ ಉತ್ತಮ ಪಡಿಸುವುದು

ಗುಂಪಿನ ಮಂಡನೆ

ತಿದ್ದುಪಡಿ ನಡೆಸುವುದು (ಮಕ್ಕಳ ಸಹಾಯದೊಂದಿಗೆ)

ಅಧ್ಯಾಪಕರ ಮಾದರಿ

ಒಂದು ಕಾಡು ಇತ್ತು. ಒಂದು ದಿನ ಮರದ ವ್ಯಾಪಾರಿಗಳಾದ ಜಾನ್, ಸಲೀಂ ಮತ್ತು ಶಿವಪ್ಪ ಮರ ಕಡಿಯಲು ಅಲ್ಲಿಗೆ. ಬಂದರು. ಪೊದೆಯ ಮರೆಯಲ್ಲಿ ಕುಳಿತಿದ್ದ ಚಿಂಟು ಮೊಲವು ಇದನ್ನು ಕಂಡಿತು. ಈ ಸುದ್ದಿಯನ್ನು ಕಾಡಿನ ರಾಜನಾದ ಬಾಲೂ ಕರಡಿಗೆ ತಿಳಿಸಲು ಓಡಿತು. ಕರಡಿ ಯೊಡನೆ ವಿಷಯ ತಿಳಿಸಿತು . ಕೂಡಲೇ ಕರಡಿ ರಾಜ ಎಲ್ಲಾ ಪ್ರಾಣಿಗಳ ಒಂದು ಸಭೆಯನ್ನು ಕರೆಯಿತು. ಎಲ್ಲರೂ ಒಗ್ಗಟ್ಟಾಗಿ ಕಾಡನ್ನು ಸಂರಕ್ಷಿಸ ಬೇಕೆಂಬ ತೀರ್ಮಾನಕ್ಕೆ ಬಂದವು. ಮರ ಕಡಿಯುವವರನ್ನು ಓಡಿಸಲು ಸಜ್ಜಾದುವು . ಆನೆಯು ಘೀಲಿ ಟ್ಟಿತು. ಹುಲಿಯು ಘರ್ಜಿಸಿತು, ಎಲ್ಲರೂ ಒಟ್ಟಾಗಿ ದಾಳಿ ಇಟ್ಟವು . ಮರ ಕಡಿಯಲು ಬಂದವರು ಜೀವ ಭಯದಿಂದ ಕೊಡಲಿಯನ್ನು ಬಿಟ್ಟು ಓಡಿ ಹೋದರು.

## ಆರಿಸಿ ಬರೆಯುವ : ಪಠ್ಯ ಪುಸ್ತಕ

ಘೋಷಣ ವಾಕ್ಯಗಳನ್ನು ಬರೆಯಿರಿ

(ಪರಿಸರ ಸಂರಕ್ಷಣೆ ಗೆ ಸಂಬಂಧಿಸಿದ) ಚರ್ಚೆಯ ಮೂಲಕ ಘೋಷಣ ವಾಕ್ಯಗಳನ್ನು ಬರೆಯುವುದು.

## ನಾಲಿಗೆ ಸುರುಳಿ

ಕಪ್ಪು ಕುಂಕುಮ ಕೆಂಪು ಕುಂಕುಮ

ಕಾಗೆ ಕಪ್ಪು ಕುಪ್ಪು ಕೆಂಪು

ತರೀಕೆರೆ ಏರಿ ಮೇಲೆ ಮೂರು ಕರಿಕುರಿ ಮರಿ ಮೆಯ್ತಿತ್ತು

ಕಾಗೆ ಪುಕ್ಕ ಗುಬ್ಬಿ ಪುಕ್ಕ

ಆಡೋಣ ಬನ್ನಿ ಕಣ್ಣು ಮುಚ್ಚಾಲೆ ಪದ್ಯ ಹಾಡಿ ಕುಣಿಯಿರಿ

## ಹೆಚ್ಚಿನ ಓದಿಗಾಗಿ

ದಿ ಗ್ರೇಟ್ ಬಾನಿಯನ್

# ಘಟಕ 2

# ಉಳುಮೆಯ ಹಿರಿಮೆ

ಭಾರತವು ಕೃಷಿ ಪ್ರಧಾನವಾದ ದೇಶವಾಗಿದೆ. ಜನಸಂಖ್ಯೆಯ ಮೂರನೇ ಎರಡರಷ್ಟು ಜನರು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಕೃಷಿಯನ್ನು ಅವಲಂಬಿಸಿದ್ದಾರೆ. ಇದು ಕೇವಲ ಜೀವನೋಪಾಯ ಮೂಲವಲ್ಲ ಆದರೆ ಜೀವನ ವಿಧಾನವಾಗಿದೆ. ಆಹಾರ , ಮೇವು ಮತ್ತು ಇಂಧನದ ಮೂಲವಾಗಿದೆ . ಭಾರತದಲ್ಲಿ ಸಾಂಪ್ರದಾಯಿಕ ಮತ್ತು ಆಧುನಿಕ ಕೃಷಿ ವಿಧಾನಗಳನ್ನು ಬಳಸಲಾಗುತ್ತದೆ. ಕೃಷಿಯ ಮಹತ್ವ, ಕೃಷಿಗೆ ಸಂಬಂಧಿಸಿದ ಆಚರಣೆಗಳು, ಹಬ್ಬಗಳು ಇತ್ಯಾದಿಗಳನ್ನು ತಿಳಿಸುವುದರೊಂದಿಗೆ ಕೃಷಿ ಕೆಲಸಗಳಲ್ಲಿ ಆಸಕ್ತಿ ಮೂಡಿಸುವುದು , ಕೃಷಿಯ ಮಹತ್ವವನ್ನು ತಿಳಿದು ಅದನ್ನು ಸಂರಕ್ಷಿಸಿ ಮುಂದಿನ ಪೀಳಿಗೆಗೆ ಹಸ್ತಾಂತರಿಸುವಂತೆ ಮಕ್ಕಳನ್ನು ಪ್ರೇರೇಪಿಸುವುದು ಈ ಘಟಕದ ಉದ್ದೇಶವಾಗಿದೆ

ಉಳುಮೆಯ ಹಿರಿಮೆ ಎಂಬ ಘಟಕದಲ್ಲಿ ರೈತ ನಮ್ಮ ಅನ್ನದಾತ ಒಂದನೇ ಪಾಠವಾಗಿದೆ.. ಬೇಸಾಯ ಮತ್ತು ಉಪಕಸುಬುಗಳ ಕುರಿತು ಇಲ್ಲಿ ಗದ್ಯರೂಪದಲ್ಲಿ ನೀಡಲಾಗಿದೆ.

ಶ್ರೀ ಕಯ್ಯಾರ ಕಿಞ್ಞಣ್ಣ ರೈಗಳು ಬರೆದ ತೋಟದ ಪಾಟ ಎಂಬ ಪದ್ಯವು ಎರಡನೇ ಅಧ್ಯಾಯ ವಾಗಿದೆ. ಕೃಷಿಯ ಹಂತಗಳನ್ನು ತಿಳಿಸುವುದರ ಜತೆಗೆ ಬೆಳೆ ಬೆಳೆದ ನಂತರ ಪ್ರಕೃತಿಯಲ್ಲಿ ಉಂಟಾಗುವ ಬದಲಾವಣೆಗಳೊಂದಿಗೆ ಕೃಷಿಕನ ಮಹತ್ವವನ್ನು ಬಿಂಬಿಸುತ್ತದೆ. ಈ ಘಟಕದ ಮೂರನೆ ಅಧ್ಯಾಯ ತೆನೆಹಬ್ಬ. ಕೃಷಿಗೆ ಸಂಬಂಧಿಸಿ ಹಲವಾರು ಹಬ್ಬಗಳಿವೆ . ಅವುಗಳಲ್ಲಿ ತೆನೆಹಬ್ಬವೂ ಒಂದು . ಈ ಹಬ್ಬದ ಸಂಕ್ಷಿಪ್ತ ಚಿತ್ರಣವನ್ನು ಪಾಠಭಾಗದಲ್ಲಿ ನೀಡಲಾಗಿದೆ.

# ಸಿಲೆಬಸ್ ಗ್ರಿಡ್

ಪಾಠ : ರೈತ ನಮ್ಮ ಅನ್ನದಾತ

**ಕಲಿಕಾ ಉದ್ದೇಶಗಳು:**

- ಲೇಖನವನ್ನು ಆಶಯದೊಂದಿಗೆ ಉಚ್ಚಾರ ಶುದ್ಧಿಯೊಂದಿಗೆ ನಿರರ್ಗಳವಾಗಿ ಓದುವುದು.
- ಲೇಖನಗಳಲ್ಲಿ ಓದುವಿಕೆ, ಪದ ಪ್ರಯೋಗದ ಬಗ್ಗೆ ಪದದ ನಿರ್ಮಾಣ ತಿಳಿಯುವುದು. (ನವೀನ ಪದಗಳು, ವಿಶೇಷಣಾ ಪದಗಳು)
- ಲೇಖನಗಳಲ್ಲಿ ಬರುವ ಸಂಭೋಧನಾ ಸೂಚಕಗಳನ್ನು ತಿಳಿಯುವುದು. (ಏಕವಚನ / ಬಹುವಚನ)
- ಪದ್ಯವನ್ನು ಸ್ವತಃ ಓದಿ ಆಸ್ವಾದಿಸುವುದು.
- ಪ್ರಾಸಪದಗಳನ್ನು ಗುರುತಿಸಲು ಸಾಧ್ಯವಾಗುವುದು.
- ನವೀನ ಪದಗಳಿಗೆ ಸಮಾನಾರ್ಥ ಪದಗಳನ್ನು ನಿಘಂಟು ನೋಡಿ ಕಂಡುಹಿಡಿಯುವುದು.
- ಪದ್ಯವನ್ನು ರಾಗ, ತಾಳ, ಭಾವದೊಂದಿಗೆ ಹಾಡಿ ಆನಂದಿಸುವುದು.
- ಸಮಾನ ಆಶಯದ ರಾಗ ತಾಳಗಳಿರುವ ಪದ್ಯ ಹಾಗೂ ಜನಪದ ಗೀತೆಗಳನ್ನು ಸಂಗ್ರಹಿಸಿ ಹಾಡುವುದು.
- ಹಾಡುವಿಕೆಯನ್ನು ಉತ್ತಮಗೊಳಿಸಲು ಬೇಕಾದ ಮೌಲ್ಯಮಾಪನ ಸೂಚಕಗಳನ್ನು ಅಧ್ಯಾಪಕರ ಸಹಾಯದಿಂದ ತಯಾರಿಸುವುದು. ಹಾಡನ್ನು ಮಂಡಿಸಿ ಸ್ವತಃ ಮತ್ತು ಪಸ್ಪರ ಮೌಲ್ಯಮಾಪನ ಮಾಡುವುದು.
- ಪದ್ಯದ ಆಶಯಗಳನ್ನು ತಿಳಿದು ಬರವಣಿಗೆಯಲ್ಲಿ ಪ್ರಕಟಿಸುವುದು.
- ಲೇಖನ, ಪದ್ಯ ಓದಿ ಆಸ್ವಾದಿಸುವುದರ ಮೂಲಕ ಕೃಷಿ ಚಟುವಟಿಕೆಗಳಲ್ಲಿ ಆಚರಣೆಗಳ ಬಗ್ಗೆ ಆಸಕ್ತಿ ಮೂಡಿಸುವುದು.

| ಕಲಿಕಾ ಉದ್ದೇಶಗಳು | | | | ಭಾಷಾ ಸತ್ಯಾಂಶಗಳು | ಭಾಷಾ ವ್ಯವಹಾರ ರೂಪಗಳು | ಕಲಿಕೋಪಕರಣಗಳು | ಮೌಲ್ಯಮಾಪನ |
|---|---|---|---|---|---|---|---|
| ಪಾಠದ ಹೆಸರು | ಆಶಯ / ತಿಳುವಳಿಕೆಗಳು | ಭಾಷಾ ಸಾಮರ್ಥ್ಯಗಳು | ಮೌಲ್ಯಗಳು/ ಮನೋಭಾವಗಳು. | | | | |
| 1. ಕೃಷಿ | ● ವಿಶೇಷಣಾ ಪದಗಳು ಲೇಖನದ ಸೌಂದರ್ಯವನ್ನು ಹೆಚ್ಚಿಸುತ್ತದೆ.<br>● ಪದ್ಯಗಳ ಆಸ್ವಾದನೆಗೆ ರಾಗ, ತಾಳಗಳು ಅಗತ್ಯವಿದೆ.<br>● ಪ್ರಾಸ ಪದಗಳು ಪದ್ಯದ ಸೌಂದರ್ಯವನ್ನು ಹೆಚ್ಚಿಸುವುದು.<br>● ಕೃಷಿ ಮಾಡುವುದರಿಂದ ಆಹಾರ ಉತ್ಪನ್ನದ ಕೊರತೆಯನ್ನು ನೀಗಿಸಬಹುಗದು. | ● ಪದ್ಯಗಳನ್ನು ರಾಗ, ತಾಳದೊಂದಿಗೆ ಹಾಡುವುದು.<br>● ಕತೆಯನ್ನು ಭಾವಪೂರ್ಣವಾಗಿ ಮಂಡಿಸುವುದು. (ಸ್ವರಭಾವ) | ● ಜಲಮೂಲಗಳನ್ನು ಸಂರಕ್ಷಿಸುವ ಮನೋಭಾವ<br>● ಅರಣ್ಯ ಸಂರಕ್ಷಣೆಯ ಮನೋಭಾವ<br>● ಕಾಡುಪ್ರಾಣಿಗಳನ್ನು ಸಂರಕ್ಷಿಸುವ ಮನೋಭಾವ ಬೆಳೆಸುವುದು.<br>● ಸಾಹಿತ್ಯಕೃತಿಗಳನ್ನು ಓದಿ ಆಸ್ವಾದಿಸುವ ಮನೋಭಾವ ಬೆಳೆಸುವುದು.<br>● ಪ್ರಕೃತಿಯನ್ನು ವೀಕ್ಷಿಸುವ ಮತ್ತು ಆಸ್ವಾದಿಸುವ ಮನೋಭಾವ ಬೆಳೆಸುವುದು. | ● ಪರಿಸರ ಸಂರಕ್ಷಣೆ ಚಟುವಟಿಕೆಗಳಲ್ಲಿ ತೊಡಗಿಸಿ ಕೊಳ್ಳುವುದು. | ● ಪದ್ಯ<br>● ಕತೆ<br>● ಚಿತ್ರಕಥೆ<br>● ಘೋಷಣಾ ವಾಕ್ಯ | ● ಕಾದಂಬರಿ<br>● ಕವನ ಸಂಕಲನ<br>● ವಿಡಿಯೋಗಳು<br>● ಹಾಡಿನ ಆಡಿಯೋ | ● ಹಾಡುವಿಕೆ (ರಾಗ, ತಾಳ, ಉಚ್ಚಾರ, ಗುಂಪಿನಲ್ಲಿ ಭಾಗವಹಿಸುವಿಕೆ)<br>● ಕತೆ ಓದುವುದು. (ಸ್ವರ ಭಾರ, ನಿರರ್ಗಳತೆ, ಹಾವಭಾವ)<br>● ಚಿತ್ರ ಕಥೆ (ಆಶಯ, ಭಾಷಾ ಪ್ರಯೋಗ, ಘಟನೆಗಳ ಕ್ರಮೀಕರಣ)<br>● ಘೋಷಣಾ ವಾಕ್ಯ (ಆಶಯ, ಪ್ರಾಸ ಬದ್ಧ) |

## ಪಾಠದೆಡೆಗೆ

ಪಾಠ : ರೈತ ನಮ್ಮ ಅನ್ನದಾತ

## ಪ್ರವೇಶ ಚಟುವಟಿಕೆ

ಕೃಷಿ ಕೆಲಸಗಳಿಗೆ ಸಂಬಂಧಿಸಿ ಚೀಟಿಗಳನ್ನು ಬರೆದು ಹಾಕುವುದು. ಮಕ್ಕಳು ಚೀಟಿ ಹೆಕ್ಕಿ ಅಭಿನಯಿಸುವರು . ಉಳಿದವರು ಕೆಲಸವನ್ನು ಗುರುತಿಸಿ ಹೇಳುವರು.

ತಾನು ಅಭಿನಯಿಸಿದ ಕೆಲಸವನ್ನು ಚಿಕ್ಕ ಪೆಟ್ಟಿಗೆಯಲ್ಲೂ ಗೆಳೆಯರು ಬರೆದದ್ದನ್ನು ದೊಡ್ಡ ಪೆಟ್ಟಿಗೆಯಲ್ಲೂ ಬರೆಯುವುದು, ಚೀಟಿಗಳಲ್ಲಿ ಬರೆಯಬೇಕಾದುದು.

* ಗದ್ದೆ ಉಳುವುದು
* ಬೀಜ ಬಿತ್ತುವುದು
* ಗಿಡ ನೆಡುವುದು
* ಮಣ್ಣು ಅಗೆಯುವುದು
* ಪೈರು ಕೊಯ್ಯುವುದುದು
* ತೆನೆ ಬಡಿಯುವುದು

ಇತ್ಯಾದಿ

## ಓಬೇಲೆ ಹಾಡು

ಅಧ್ಯಾಪಕರು ಮಕ್ಕಳು ಸೇರಿಕೊಂಡು ರಾಗ ತಾಳ ಭಾವಗಳೊಂದಿಗೆ ಅಭಿನಯದ ಮೂಲಕ ಹಾಡುವುದು .

## ಚಿತ್ರ ಓದು

ಆಶಯ ಗ್ರಹಣ ಪ್ರಶ್ನೆಗಳನ್ನು ಕೇಳುವುದು .

## ಓದುವುದು

ಮೌನ ಓದು

ಗುಂಪಿನಲ್ಲಿ ಓದು

ಮಕ್ಕಳಿಂದ ಗಟ್ಟಿ ಓದು

ಅಧ್ಯಾಪಕರ ಮಾದರಿ ಓದು

ಸರಪಳಿ ಓದು

ನವೀನ ಪದ , ಒತ್ತಕ್ಷರ ಪದ, ಪದ ಹುಡುಕುವುದು, ಪದ ಕ್ರಮೀಕರಣ ಇತ್ಯಾದಿ

ಸಂದರ್ಶನ

ಪ್ರಶ್ನಾವಳಿ ತಯಾರಿ

ಗುಂಪಿನಲ್ಲಿ ಉತ್ತಮ ಪಡಿಸುವುದು

ಮಂಡನೆ

ಬಯಲು ಪ್ರವಾಸ ಕೃಷಿಕನೊಂದಿಗೆ ಸಂದರ್ಶನ

ಘೋಷಣಾ ವಾಕ್ಯ

ಕೃಷಿ ಮತ್ತು ಸಂಸ್ಕೃತಿ ಅಳಿವಿನ ಅಂಚಿನಲ್ಲಿದೆ ಯುವ ಜನರನ್ನು ಕೃಷಿಯತ್ತ ಬಲವು ತೋರಿಸುವುದಿಲ್ಲ ಹೀಗಾದರೆ ಮುಂದೆ ಹಲವು ಸಮಸ್ಯೆಗಳು ತಲೆದೋರ ಬಹುದು - ಚರ್ಚೆ

ಜನಜಾಗೃತಿಯನ್ನು ಮೂಡಿಸುವ ಸಲುವಾಗಿ ಘೋಷಣಾ ವಾಕ್ಯಗಳನ್ನು ರಚಿಸುವುರು,.

**ಹಸಿರಿನ ಬೆಳೆ**
**ಸಂತೃಪ್ತಿಯ ಇಳೆ**

**ರೈತ ನಮ್ಮ ಅನ್ನದಾತ**
**ಹಗಲು ಇರುಳು ದುಡಿವ ನೀತ**

**ಬೆಳೆಸರಿ ಕೃಷಿ**
**ಪಡೆಯಿರಿ ಖುಷಿ**

## ಚಟುವಟಿಕೆಗಳು

## ಪದ ಕ್ರಮೀಕರಣ

ಪಾಠ ಭಾಗದಲ್ಲಿ ಬಂದಿರುವ ನವೀನ ಪದಗಳ ಅಕ್ಷರಕಾರ್ಡುಗಳನ್ನು ನೆಲದಲ್ಲಿ ಹರಡುವುದು. ಮಕ್ಕಳು ಕಾರ್ಡುಗಳನ್ನು ಜೋಡಿಸಿ ಪದ ರಚಿಸುವರು. ನಿರ್ದಿಷ್ಟ ಸಮಯ ದಲ್ಲಿ ಅತೀ ಹೆಚ್ಚು ಪದ ರಚಿಸಿದನರನ್ನು ಅಭಿನಂದಿಸು ವುದು

* ಬಿಟ್ಟ ಅಕ್ಷರವನ್ನು ತುಂಬಿಸಿರಿ
* ಪದ ಪೂರ್ತಿಗೊಳಿಸುವುದು
* ಮಂಡನೆ

## ಪ್ರಶ್ನೋತ್ತರ

ಮಕ್ಕಳನ್ನು ಗುಂಪುಮಾಡಿ ಗುಂಪಿನಲ್ಲಿ ಪಾಠಭಾಗವನ್ನು ಓದಿ ಪ್ರಶ್ನೆ ತಯಾರಿಸಲು ಹೇಳುವುದು

* ಪರಸ್ಪರ ಪ್ರಶ್ನೆಗಳನ್ನು ಕೇಳುವುದು. ಒಂದು ಗುಂಪು ಕೇಳಿದ ಪ್ರಶ್ನೆಗೆ ಇನ್ನೊಂದು ಗುಂಪು ಉತ್ತರಿಸುವುದು
* ಪಾಠಪುಸ್ತಕದದಲ್ಲಿ ನೀಡಿದ ಪ್ರಶ್ನೆಗಳಿಗೆ ವೈಯಕ್ತಿಕವಾಗಿ ಉತ್ತರಿಸುವುದು
* ಮಂಡನೆ
* ಪರಸ್ಪರ ಮೌಲ್ಯಮಾಪನ
* ಟೀಚರ್ ವರ್ಶನಾ

## ವಾಕ್ಯ ರಚನೆ

ಹುಡುಕಿ ಬರೆಯಿರಿ ಉಪಕರಣಗಳನ್ನು ಹುಡುಕಿ ಬರೆಯುವುದು .

## ಸಂದರ್ಶನ ನಡೆಸೋಣ

ಶಾಲೆ ಸಮೀಪವಿರುವ ಕೃಷಿಕರೊಂದಿಗೆ ಸಂದರ್ಶನ ನಡೆಸಲು ಪ್ರಶ್ನಾವಳಿಗಳನ್ನು ವೈಯಕ್ತಿಕವಾಗಿ ತಯಾರಿಸುವುದು.

ತೋಟದ ಪಾಟ

ಚಿತ್ರವನ್ನು ಓದುವುದು .

ಪದ್ಯವನ್ನು ವೈಯಕ್ತಿಕವಾಗಿ ಓದುವುದು

ವೈಯಕ್ತಿಕವಾಗಿ .

ಗುಂಪಿನಲ್ಲಿ ರಾಗ ಸಂಯೋಜಿಸಿ ಹಾಡುವುದು.

ಅಧ್ಯಾಪಕರು ಹಾಡುವುದು ಟಿಪಿಆರ್ (ಒಂದು ಗುಂಪಿನವರು ಹಾಡುವುದು ಇನ್ನೊಂದು ಗುಂಪು ಅಭಿನಯಿಸುವುದು)

## ಚಟುವಟಿಕೆಗಳು

### ಜೋಡಿಸಿರಿ

ಅಧ್ಯಾಪಕರು ಐಸಿಟಿಯಲ್ಲಿ ಕೃಷಿ ಉಪಕರಣಗಳನ್ನು ತೋರಿಸುವರು. ಕೃಷಿ ಉಪಕರಣಗಳ ಉಪಯೋಗದ ವಿಡಿಯೋ ಪ್ರದರ್ಶಿಸುವುದು. ವೈಯಕ್ತಿಕವಾಗಿ ಕೃಷಿ ಉಪಕರಣಗಳ ಉಪಯೋಗವನ್ನು ಬರೆಯುವುದು. ಮಂಡನೆ ಗುಂಪಿನಲ್ಲಿ ಉತ್ತಮ ಪಡಿಸುವುದು. ಗುಂಪಿನ ಮಂಡನೆ .

ಮಕ್ಕಳಿಗೆ ಪರಿಚಿತವಾದ ಕೃಷಿ ಉಪಕರಣಗಳ ಚಿತ್ರರಚನೆ .

ಟೀಚರ್ ವರ್ಷನ್

ಅಕ್ಷರಗಳನ್ನು ಕ್ರಮೀಕರಿಸಿ ಪದರಚಿಸಿರಿ .

ಪಾವನವಿದೆ

ಗುಣದಲಿ

ಗುಲಾಬಿ

ಬೂದಿಗೊಬ್ಬರ

ಭಾಗ್ಯವಿಧಾತ

## ಪದ್ಯದ ಸಾಲನ್ನು ಹುಡುಕಿರಿ

ಕೃಷಿ ಉಪಕರಣಗಳನ್ನು ಹಿಡಿದು ತೋಟಕ್ಕೆ ಹೋಗುವುದು.

ವಿವಿಧ ಬಣ್ಣದ ಮತ್ತು ಪರಿಮಳಯುಕ್ತ ಸಸಿಗಳನ್ನು ನೆಡುವುದು .

ಪ್ರತಿದಿನ ಸಂತೋಷದಿಂದ ಗಿಡಗಳಿಗೆ ನೀರೆರೆಯುವ.

## ಪದ್ಯದ ಆಸ್ವಾದನಾ ಟಿಪ್ಪಣಿ

ಪದ್ಯಕ್ಕೆ ಸಂಬಂಧಿಸಿದ ಆಶಯ ಗ್ರಹಣ ಪ್ರಶ್ನೆಗಳನ್ನು ಕೇಳುವುದು. ಪದ್ಯದ ಹೆಸರು

ಪದ್ಯ ಬರೆದವರು

ಪದ್ಯದಲ್ಲಿರುವ ಸಾಲುಗಳು

ಪದ್ಯ ಯಾವುದರ ಕುರಿತಾಗಿದೆ ಪದ್ಯದಲ್ಲಿ ಪ್ರಾಸಪದಗಳಿವೆ? ಇಷ್ಟವಾದ ಸಾಲು ಯಾವುದು? ಯಾಕೆ ?

ವೈಯಕ್ತಿಕವಾಗಿ ಬರೆಯುವುದು ಮಂಡನೆ,

ಗುಂಪಿನಲ್ಲಿ ಉತ್ತಮ ಪಡಿಸುವುದು

ಮಂಡನೆ

ಟೀಚರ್ ವರ್ಶನ್

## ಒಗಟು ಬಿಡಿಸಿರಿ

1. ಅಂಕುಡೊಂಕು ಸಂಕಪಾಲ ಮೂರು ತಲೆ ಹತ್ತು ಕಾಲು

   ಉತ್ತರ : ಗದ್ದೆ ಉಳುವುದು

2. ..........................................................

3. ..........................................................

4. .........................................................

5. .................................................................

ಬಾರೋ ಈ ಮಣ್ಣಿಗೆ ಮಳೆರಾಯ ಬಾರೋ ಈ ಮಣ್ಣಿಗೆ ಮಳೆರಾಯ ತಾರೋ ನೀ ಸಂಪದಸೌಭಾಗ್ಯ l2l

ಗುಡುಗೀನ ಕುದುರೆ ಏರಿ ಬಿರುಗಾಳಿ ಬೆನ್ನನ್ನೇರಿ

ಮಿಂಚಿನ ಖಡ್ಗದ ಸರದಾರ l2l ಬಾರೋ

ಕಾರ್ಮೋಡ ಬೆಳ್ಳಿ ಮೋಡ ಮಳೆ ಮೋಡ ಮಿಂಚಿನ ಮೋಡ ಸ್ವಾತಿಯ ಮುತ್ತಿನ ಮೋಡ ಬಲು ಅಂದಾ l2l ಬಾರೋ

ಗಿಡಕ್ಕೆಲ್ಲಾ ಹೂಗಳ ಮುಡಿಸಿ ವನಕೆಲ್ಲಾ ಹಸಿರನ್ನುಡಿಸಿ ನೆಲಕ್ಕೆಲ್ಲಾ ನೀರೊಡೊ ಮಳೆರಾಯ l2l ಬಾರೋ

ತೆಂಗೀನ ತೋಟದ ಚಂದ ಕಂಗೀನ ತೋಪಿನ ಅಂದ ಮಾವಿನ ಹೂವಿನ ಗಂಧ ನಿನ್ನಿಂದಾll2ll ಬಾರೋ

ಹಾಡಿರಿ........ ಕುಣಿಯಿರಿ

## ತೆನೆ ಹಬ್ಬ

'ಮನೆ ತುಂಬಿಸುವುದು ' ಕೃಷಿ ಹಬ್ಬದ ಆಚರಣೆಯ ವಿಡಿಯೋ ಪ್ರದರ್ಶಿಸುವುದು

ಚರ್ಚೆ

ಚಿತ್ರ ಓದು

ಪಾಠ ಭಾಗವನ್ನು ವ್ಯವಹಾರ ರೂಪಕ್ಕೆ ತಕ್ಕಂತೆ ವೈಯಕ್ತಿಕವಾಗಿ ಓದುವುದು

ಮಂಡನೆ

ಅಧ್ಯಾಪಕರ ಓದು

### ಚಟುವಟಿಕೆಗಳು

ಬಿಟ್ಟ ಅಕ್ಷರವನ್ನು ತುಂಬಿಸಿರಿ ಅಧ್ಯಾಪಕರು ಅಕ್ಷರ ಕಾರ್ಡುಗಳನ್ನು ನೆಲದಲ್ಲಿ ಹರಡುವುದು .ಮಕ್ಕಳು ಪಾಠ ಭಾಗದಲ್ಲಿ ಬಂದಿರುವ ಪದಗಳನ್ನು ನೆನಪಿಸಿಕೊಂಡು ಅಕ್ಷರ ಕಾರ್ಡುಗಳನ್ನು ಜೋಡಿಸಿ ಪದರಚಿಸುವರು.

ವೈಯಕ್ತಿಕವಾಗಿ ಪದರಚಿಸುವುದು. ಪದ ವಿಂಗಡಣೆ

(ವೈವಿಧ್ಯಮಯ ಕಲಿಕಾ ಪ್ರಕ್ರಿಯೆಗಳ ಮೂಲಕ ಚಟುವಟಿಕೆಯನ್ನು ಮಾಡುವುದು) ಬಹುವಚನ ಪದ ಬರೆಯಿರಿ.

ಬಾಯ್ದೆರೆಯಾಗಿ ಕೆಲವು ಪದಗಳು ಮತ್ತು ಅವುಗಳ ಬಹುವಚನ ಪದಗಳನ್ನು ಹೇಳಿಸುವುದು

ಉದಾ : ಚೀಲ - ಚೀಲಗಳು

ಪೆಟ್ಟಿಗೆ - ಪೆಟ್ಟಿಗೆಗಳು

ಬಳೆ - ಬಳೆಗಳು

ಮಾಲೆ - ಮಾಲೆಗಳು

ಮಕ್ಕಳನ್ನು ಎರಡು ಸಾಲುಗಳಲ್ಲಾಗಿ ನಿಲ್ಲಿಸುವುದು. (ಮಕ್ಕಳ ಸಂಖ್ಯೆಗಳನ್ನು ಅನುಸರಿಸಿ ಬದಲಾವಣೆ ಮಾಡಬಹುದು. ) ಬಹುವಚನ ಪದಗಳನ್ನು ಮೇಜಿನಲ್ಲಿ ಹರಡುವುದು .ಏಕವಚನ ಪದಗಳನ್ನು ಮಕ್ಕಳಿಗೊಂದರಂತೆ ನೀಡುವುದು. ಅಧ್ಯಾಪಕರು ಸೀಟಿ ಊದಿದಾಗ ಮಕ್ಕಳು ಒಬ್ಬೊಬ್ಬರಾಗಿ ತಮಗೆ ಸಿಕ್ಕಿದ ಪದದ ಬಹುವಚನವನ್ನು ಹುಡುಕಿ ಅವರವರ ಭಾಗದಲ್ಲಿ ಜೋಡಿಸುವರು .ಯಾವ ಗುಂಪು ಮೊದಲು ಜೋಡಿಸುತ್ತದೆಯೋ ಆ ಗುಂಪು ವಿಜಯಿ ಆಗುವುದು.

TB ಚಟುವಟಿಕೆ ವೈಯಕ್ತಿಕವಾಗಿ ಮಾಡುವುದು.

ಕೃಷಿ ಹಬ್ಬದ ಕಿರು ಟಿಪ್ಪಣಿ ಬರೆಯಿರಿ

ಓಣಂ ಪದ ಸೂರ್ಯ ಓಣಂ ಹಬ್ಬದ ವಿಡಿಯೋ ಪ್ರದರ್ಶನ

ಪದಸೂರ್ಯ ವನ್ನು ಪೂರ್ತಿಗೊಳಿಸುವುದು

ವೈಯಕ್ತಿಕಗಿ ಕಿರು ಟಿಪ್ಪಗಿ ತಯಾರಿಸುವುದು

ಮಂಡನೆ

ಗುಂಪಿನಲ್ಲಿ ಉತ್ತಮ ಪಡಿಸುವುದು

ಮಂಡನೆ

ಟೀಚರ್ ವರ್ಷನ್

## ಹೆಚ್ಚಿನ ಅರಿವಿಗಾಗಿ

ಭಾರತದ ವಿವಿಧ ರಾಜ್ಯಗಳಲ್ಲಿ ಆಚರಿಸುವ ಕೃಷಿ ಹಬ್ಬಗಳ ವಿವರಗಳು ಹಾಗೂ ವಿಡಿಯೋ ಪ್ರದರ್ಶನ.

# ಘಟಕ 3

# ಕಲೆ ಮತ್ತು ಸಂಸ್ಕೃತಿ

## ಮುನ್ನುಡಿ

ಒಂದು ನಾಡಿನ ಜನರ ನಡೆ, ನುಡಿ ಆಚಾರ ವಿಚಾರ ರೀತಿ ನೀತಿಗಳಲ್ಲಿ ಆ ನಾಡಿನ ಕಲೆ ಮತ್ತು ಸಂಸ್ಕೃತಿಯು ಪ್ರತಿಬಿಂಬಿಸುವುದು. ಹಬ್ಬಗಳು ನಮ್ಮ ಸಂಸ್ಕೃತಿಯ ಅವಿಭಾಜ್ಯ ಘಟಕವಾಗಿದೆ. ಇದು ಸಮಾಜದಲ್ಲಿ ಮಾನವೀಯತೆಯ ಸಂಬಂಧವನ್ನು ದೃಢಗೊಳಿಸುವುದರಲ್ಲಿ ಪ್ರಧಾನ ಪಾತ್ರ ವಹಿಸುತ್ತದೆ. ನಮ್ಮ ನಾಡಿನ ಕಲೆ ಮತ್ತು ವಿವಿಧ ಆಚರಣೆಗಳ ಕುರಿತು ತಿಳುವಳಿಕೆಯನ್ನು ಮೂಡಿಸುವುದು ಈ ಘಟಕದ ಪ್ರಧಾನ ಗುರಿಯಾಗಿದೆ.

ಒಂದನೇ ಪಾಠದಲ್ಲಿ ನವರಾತ್ರಿ, ಈದುಲ್ ಫಿತರ್ ಮತ್ತು ಹಬ್ಬಗಳ ಕುರಿತು ವಿವರಣೆ ನೀಡಲಾಗಿದೆ. ಇಲ್ಲಿ ನವರಾತ್ರಿ ಹಬ್ಬಕ್ಕೆ ಸಂಬಂಧಿಸಿದ ವಿವಿಧ ಧಾರ್ಮಿಕ ಆಚರಣೆಗಳು, ಸಾಂಸ್ಕೃತಿಕ ಕಾರ್ಯಕ್ರಮಗಳು ಮೊದಲಾದವುಗಳ ಕುರಿತು ವಿವರಿಸಲಾಗಿದೆ. ಈದುಲ್ ಫಿತರ್ ಇಸ್ಲಾಂ ಧರ್ಮದವರು ಆಚರಿಸುವ ಪ್ರಧಾನ ಹಬ್ಬವಾಗಿದೆ. ಇದ್ದವನು ಇಲ್ಲದವನಿಗೆ ಕೊಟ್ಟು ಸಹಾಯ ಮಾಡಬೇಕು ಎನ್ನುವುದು ಈ ಹಬ್ಬದ ಪ್ರಧಾನ ಸಂದೇಶವಾಗಿದೆ. ಈ ಪಾಠದಲ್ಲಿ ಇದರ ಕುರಿತು ಪ್ರತಿಪಾದಿಸಲಾಗಿದೆ. ಕ್ರಿಸ್ಮಸ್ ಕ್ರೈಸ್ತ ಧರ್ಮದವರ ಪ್ರಧಾನ ಹಬ್ಬವಾಗಿದೆ. ದಯೆ, ಕರುಣೆ, ಪ್ರೀತಿ, ಸೌಹಾರ್ದವನ್ನು ಈ ಹಬ್ಬವು ಸಾರುತ್ತದೆ. ಈ ಹಬ್ಬದ ಕುರಿತಾದ ವಿವರಣೆಯನ್ನು ಇಲ್ಲಿ ನೀಡಲಾಗಿದೆ.

ಎರಡನೇ ಪಾಠದಲ್ಲಿ ನಮ್ಮ ನಾಡಿನ ಜನಪದ ಕಲೆಯಾದ ಯಕ್ಷಗಾನದ ಕುರಿತು ಪ್ರತಿಪಾದಿಸಲಾಗಿದೆ. ಇದರಲ್ಲಿ ಯಕ್ಷಗಾನದ ಪಿತಾಮಹನಾದ ಪಾರ್ತಿಸುಬ್ಬನ ಕುರಿತು ಹಾಗೂ ಯಕ್ಷಗಾನದ ಉದ್ಭವದ ಕುರಿತು ತಿಳಿಸಲಾಗಿದೆ.

# ಸಿಲೆಬಸ್ ಗ್ರಿಡ್

ಪಾಠ : ಕಲೆ ಮತ್ತು ಸಂಸ್ಕೃತಿ

**ಕಲಿಕಾ ಉದ್ದೇಶಗಳು:**

- ಲೇಖನವನ್ನು ಆಶಯಗ್ರಹಣದೊಂದಿಗೆ ಉಚ್ಚಾರ ಶುದ್ಧಿಯೊಂದಿಗೆ ನಿರರ್ಗಳವಾಗಿ ಓದುವುದು.
- ಲೇಖನಗಳಲ್ಲಿ ಓದುವಿಕೆ, ಪದ ಪ್ರಯೋಗದ ಬಗ್ಗೆ (ನವೀನ ಪದಗಳು, ವಿಶೇಷಣಾ ಪದಗಳು, ಪದ ವಿಂಗಡಣೆ) ತಿಳಿಯುವುದು.
- ಪದ್ಯದ ಆಶಯ, ತಾಳ, ಪ್ರಾಸಪದ ಪ್ರಯೋಗಗಳು ಇತ್ಯಾದಿಗಳನ್ನು ತಿಳಿಯುವುದು.
- ವಿಷಯ (ಆಶಯ), ಚೌಕಟ್ಟು, ವಿಶೇಷಣಾ ಪದಗಳ ಬಳಕೆಗಳನ್ನು ತಿಳಿಯುುವುದು.
- ಅಕ್ಷರಗಳಿಂದ ಅರ್ಥವತ್ತಾದ ಪದಗಳನ್ನು ರಚಿಸುವುದು.
- ಪದ್ಯವನ್ನು ರಾಗ, ತಾಳ, ಭಾವದೊಂದಿಗೆ ಆಲಿಸಿಯೂ ಹಾಡಿಯೂ ಆನಂದಿಸುವುದು.
- ಕಾ ಗುಣಿತಾಕ್ಷರಗಳ ಪ್ರಯೋಗವನ್ನು ತಿಳಿಯುವುದು.
- ವಿವಿಧ ರೀತಿಯ ಪತ್ರಗಳ (ಶುಭಾಶಯ ಪತ್ರ, ಆಮಂತ್ರಣ ಪತ್ರಿಕೆ, ಭಿತ್ತಿಪತ್ರಿಕೆ) ಚೌಕಟ್ಟನ್ನು ತಿಳಿಯುವುದು ಮತ್ತು ರಚಿಸುವುದು.
- ಜನಪದ ಗೀತೆಗಳ ಪ್ರಕಾರವನ್ನು ತಿಳಿಯುವುದು.
- ಜನಪದ ಗೀತೆಯನ್ನು ರಾಗ, ತಾಳ, ಭಾವಗಳೊಂದಿಗೆ ಹಾಡಿ ಆಲಿಸಿ ಆನಂದಿಸುವುದು.
- ಪ್ರಾದೇಶಿಕವಾದ ಕಲಾ ಪ್ರಕಾರಗಳ ಚಿತ್ರಗಳನ್ನು ಸಂಗ್ರಹಿಸವುದು, ಅವುಗಳ ಹಿನ್ನೆಲೆಯನ್ನು ತಿಳಿದುಕೊಳ್ಳುವುದು.
- ನಾಡಿನ ಸಂಸ್ಕೃತಿಯನ್ನು ತಿಳಿಯಲು ಹಬ್ಬ, ಆಚರಣೆಗಳ ಪ್ರಾಧಾನ್ಯವನ್ನು ತಿಳಿದುಕೊಳ್ಳುವುದು.

| ಕಲಿಕಾ ಉದ್ದೇಶಗಳು | | | | ಭಾಷಾ ಸತ್ಯಾಂಶಗಳು | ಭಾಷಾ ವ್ಯವಹಾರ ರೂಪಗಳು | ಕಲಿಕೋಪಕರಣಗಳು | ಮೌಲ್ಯಮಾಪನ |
|---|---|---|---|---|---|---|---|
| ಪಾಠದ ಹೆಸರು | ಆಶಯ / ತಿಳುವಳಿಕೆಗಳು | ಭಾಷಾ ಸಾಮರ್ಥ್ಯಗಳು | ಮೌಲ್ಯಗಳು/ ಮನೋಭಾವಗಳು. | | | | |
| 1. ಕಲೆ ಮತ್ತು ಸಂಸ್ಕೃತಿ | ● ವಿಶೇಷಣಾ ಪದಗಳು ಲೇಖನದ ಸೌಂದರ್ಯವನ್ನು ಹೆಚ್ಚಿಸುತ್ತದೆ.<br>● ಪದ್ಯಗಳ ಆಸ್ವಾದನೆಗೆ ರಾಗ, ತಾಳಗಳು ಅಗತ್ಯವಿದೆ.<br>● ಪ್ರಾಸ ಪದಗಳು ಪದ್ಯದ ಸೌಂದರ್ಯವನ್ನು ಹೆಚ್ಚಿಸುವುದು.<br>● ಕೃಷಿ ಮಾಡುವುದರಿಂದ ಆಹಾರ ಉತ್ಪನ್ನದ ಕೊರತೆಯನ್ನು ನೀಗಿಸಬಹುಗದು. | ● ಪದ್ಯಗಳನ್ನು ರಾಗ, ತಾಳದೊಂದಿಗೆ ಹಾಡುವುದು.<br>● ಕತೆಯನ್ನು ಭಾವಪೂರ್ಣವಾಗಿ ಮಂಡಿಸುವುದು. (ಸ್ವರಭಾವ) | ● ಜಲಮೂಲಗಳನ್ನು ಸಂರಕ್ಷಿಸುವ ಮನೋಭಾವ<br>● ಅರಣ್ಯ ಸಂರಕ್ಷಣೆಯ ಮನೋಭಾವ<br>● ಕಾಡುಪ್ರಾಣಿಗಳನ್ನು ಸಂರಕ್ಷಿಸುವ ಮನೋಭಾವ ಬೆಳೆಸುವುದು.<br>● ಸಾಹಿತ್ಯಕೃತಿಗಳನ್ನು ಓದಿ ಆಸ್ವಾದಿಸುವ ಮನೋಭಾವ ಬೆಳೆಸುವುದು.<br>● ಪ್ರಕೃತಿಯನ್ನು ವೀಕ್ಷಿಸುವ ಮತ್ತು ಆಸ್ವಾದಿಸುವ ಮನೋಭಾವ ಬೆಳೆಸುವುದು. | ● ಪರಿಸರ ಸಂರಕ್ಷಣೆ ಚಟುವಟಿಕೆಗಳಲ್ಲಿ ತೊಡಗಿಸಿ ಕೊಳ್ಳುವುದು. | ● ಪದ್ಯ<br>● ಕತೆ<br>● ಚಿತ್ರಕಥೆ<br>● ಘೋಷಣಾ ವಾಕ್ಯ | ● ಕಾದಂಬರಿ<br>● ಕವನ ಸಂಕಲನ<br>● ವಿಡಿಯೋಗಳು<br>● ಹಾಡಿನ ಆಡಿಯೋ | ● ಹಾಡುವಿಕೆ (ರಾಗ, ತಾಳ, ಉಚ್ಚಾರ, ಗುಂಪಿನಲ್ಲಿ ಭಾಗವಹಿಸುವಿಕೆ)<br>● ಕತೆ ಓದುವುದು. (ಸ್ವರ ಭಾರ, ನಿರರ್ಗಳತೆ, ಹಾವಭಾವ)<br>● ಚಿತ್ರ ಕಥೆ (ಆಶಯ, ಭಾಷಾ ಪ್ರಯೋಗ, ಘಟನೆಗಳ ಕ್ರಮೀಕರಣ)<br>● ಘೋಷಣಾ ವಾಕ್ಯ (ಆಶಯ, ಪ್ರಾಸ ಬದ್ಧ) |

## ಚಟುವಟಿಕೆಗಳು

ಪಾಠಭಾಗದ  ಚಿತ್ರದ ಕುರಿತು ಆಶಯ ವಿನಿಮಯ ನಡೆಸುವುದು.

ಚಿತ್ರದಲ್ಲಿ  ಏನೇನಿದೆ ?

ಬಳಿಕ ಪ್ರವೇಶ ಚಟುವಟಿಕೆಯನ್ನು ಮಕ್ಕಳು ವೈಯಕ್ತಿಕವಾಗಿ ಮಾಡಿ ಮಂಡಿಸಲಿ.

### ಪಾಠದ ಕಡೆಗೆ

ಚಿತ್ರದಲ್ಲಿ  ಏನೇನಿದೆ  ? ( TB  33)

ನವರಾತ್ರಿ, ಈದುಲ್ ಫಿತರ್ ಮತ್ತು  ಕ್ರಿಸ್ ಮಸ್ ಎಂಬ ಗದ್ಯಭಾಗವನ್ನು ವೈಯಕ್ತಿಕವಾಗಿ ಓದುವುದು

ಆಶಯ ಗ್ರಹಣ ಪ್ರಶ್ನೆಗಳನ್ನು ಕೇಳುವುದು.

ಹಿಂದು ಧರ್ಮದವರು ಆಚರಿಸುವ ಪ್ರಧಾನ ಹಬ್ಬಗಳು ಯಾವುವು   ?

ಮಕ್ಕಳಲ್ಲಿ ಸರಳ ಚರ್ಚೆ ನಡೆಸುವುದು.

ಗುಂಪಿನಲ್ಲಿ ಓದುವುದು.

ಗಟ್ಟಿ ಓದು

ಅಧ್ಯಾಪಕರ ಮಾದರಿ ಓದು

ಓದಿಗೆ ಸಂಬಂಧಿಸಿ ಚಟುವಟಿಕೆಗಳನ್ನು ನಡೆಸುವುದು

ನವೀನ ಪದಗಳನ್ನು ಪಟ್ಟಿ ಮಾಡುವುದು

ಒತ್ತಕ್ಷರ /  ಅನುಸ್ವಾರ ಪದಗಳನ್ನು ಹುಡುಕಿ ಬರೆಯುವುದು

ಈದುಲ್ ಫಿತರ್  ಎಂಬ ಗದ್ಯಭಾಗವನ್ನು ವೈಯಕ್ತಿಕವಾಗಿ ಓದುವುದು

ಆಶಯ ಗ್ರಹಣ ಪ್ರಶ್ನೆಗಳನ್ನು ಕೇಳುವುದು.

ಇಸ್ಲಾಂ ಧರ್ಮದವರು ಆಚರಿಸುವ ಪ್ರಧಾನ ಹಬ್ಬ ಯಾವುದು?

ಮಕ್ಕಳಲ್ಲಿ ಸರಳ ಚರ್ಚೆ ನಡೆಸುವುದು.

ಗುಂಪಿನಲ್ಲಿ ಓದುವುದು.

ಗಟ್ಟಿ ಓದು

ಅಧ್ಯಾಪಕರ ಮಾದರಿ ಓದು

ಓದಿಗೆ ಸಂಬಂಧಿಸಿ ಚಟುವಟಿಕೆಗಳು

ನವೀನ ಪದಗಳನ್ನು ಪಟ್ಟಿ ಮಾಡುವುದು

ಒತ್ತಕ್ಷರ / ಅನುಸ್ವಾರ ಪದಗಳನ್ನು ಹುಡುಕಿ ಬರೆಯುವುದು

ಕ್ರಿಸ್ ಮಸ್ ಎಂಬ ಗದ್ಯಭಾಗವನ್ನು ವೈಯಕ್ತಿಕವಾಗಿ ಓದುವುದು

ಆಶಯ ಗ್ರಹಣ ಪ್ರಶ್ನೆಗಳನ್ನು ಕೇಳುವುದು.

ಗುಂಪಿನಲ್ಲಿ ಓದುವುದು.

ಗಟ್ಟಿ ಓದು

ಅಧ್ಯಾಪಕರ ಮಾದರಿ ಓದು

ಓದಿಗೆ ಸಂಬಂಧಿಸಿ ಚಟುವಟಿಕೆಗಳನ್ನು ನೀಡುವುದು.

ನವೀನ ಪದಗಳನ್ನು ಪಟ್ಟಿ ಮಾಡುವುದು

ಒತ್ತಕ್ಷರ / ಅನುಸ್ವಾರ ಪದಗಳನ್ನು ಹುಡುಕಿ ಬರೆಯುವುದು.

**ಉತ್ತರಿಸಿರಿ** TB 37

ಈ ಚಟುವಟಿಕೆಯನ್ನು ಮಕ್ಕಳು ವೈಯಕ್ತಿಕವಾಗಿ ಮಾಡಿ ಮಂಡಿಸಲಿ.

ಗುಂಪಿನಲ್ಲಿ ಉತ್ತಮಪಡಿಸಿ ಬರೆಯಲಿ.

ಅಧ್ಯಾಪಕರು ಮೌಲ್ಯನಿರ್ಣಯ ಮಾಡುವುದು.

**ಪದ ವಿಂಗಡಣೆ** TB 38

ಈ ಚಟುವಟಿಕೆಯನ್ನು ಮಕ್ಕಳು ವೈಯಕ್ತಿಕವಾಗಿ ಮಾಡಿ ಮಂಡಿಸಲಿ.

ಅಧ್ಯಾಪಕರು ಮೌಲ್ಯನಿರ್ಣಯ ಮಾಡುವುದು.

**ವಿವರಣೆ ಬರೆಯಿರಿ** TB 38

ಇಲ್ಲಿ ಮಕ್ಕಳು ತಮಗೆ ಇಷ್ಟವಿರುವ ಹಬ್ಬದ ಕುರಿತು ವಿವರಣೆ ಬರೆಯಲಿ. ಈ ಚಟುವಟಿಕೆಯನ್ನು ಮಕ್ಕಳು ವೈಯಕ್ತಿಕವಾಗಿ ಮಾಡಿ ಮಂಡಿಸಲಿ.

**ಚರ್ಚಿಸುವ** TB 38

ಹಬ್ಬಗಳ ಸಂದರ್ಭದಲ್ಲಿ ಪಟಾಕಿ ಸಿಡಿಸುವುದಿದೆ. ಆ ಸಂದರ್ಭದಲ್ಲಿ ವಹಿಸ ಮುಂಜಾಗ್ರತ ಕ್ರಮಗಳ ಬಗ್ಗೆ ಚರ್ಚಿಸಿ ಗುಂಪಿನಲ್ಲಿ ಬರೆಯಲಿ

**ಪದ್ಯ ಮುಂದುವರಿಸುವ** TB 39

ಪಠ್ಯಭಾಗದಲ್ಲಿ ನೀಡಿರುವ ಪದ್ಯವನ್ನು ಮುಂದುವರಿಸಿ ಬರೆಯಲಿ

ವೈಯಕ್ತಿಕವಾಗಿ ಬರೆದು ಮಂಡಿಸಲಿ,

ಗುಂಪಿನಲ್ಲಿ ಉತ್ತಮಪಡಿಸಿ ಮಂಡಿಸಲಿ

ಅಧ್ಯಾಪಕ ಮಾದರಿ

**ಶುಭಾಶಯ ಪತ್ರ** TB39

ಮಕ್ಕಳಲ್ಲಿ ವಿವಿಧ ಪತ್ರಗಳ ಬಗ್ಗೆ ಚರ್ಚಿಸುವುದು

ಪತ್ರ ಬರೆಯುವಾಗ ಏನೆಲ್ಲಾ ತಿಳಿದಿರಬೇಕು

ಯಾರು ಬರೆಯುವುದು

ಯಾರಿಗೆ ಬರೆಯುವುದು

ಯಾಕೆ ಬರೆಯುವುದು

ಎಲ್ಲಿಂದ ಬರೆಯುವುದು

ಯಾವಾಗ ಬರೆಯುವುದು

ಸಂಭೋದನೆ ಹೇಗೆ

ಮುಕ್ತಾಯ ಹೇಗೆ

ಬಳಿಕ ಪಾಠ ಪುಸ್ತಕದಲ್ಲಿರುವ ಶುಭಾಶಯ ಪತ್ರದ ಕುರಿತು ಚರ್ಚಿಸುವುದು.

ಮಕ್ಕಳಲ್ಲಿ ವೈಯಕ್ತಿಕವಾಗಿ ಯಾವುದಾದರೂ ಹಬ್ಬಕ್ಕೆ ಸಂಬಂಧಿಸಿದ ಒಂದು ಶುಭಾಶಯ ಪತ್ರವನ್ನು ರಚಿಸಲಿ , ಮಂಡಿಸಲಿ .

ಗುಂಪಿನಲ್ಲಿ ಉತ್ತಮಪಡಿಸಿ ಮಂಡಿಸಲಿ.

**ಹುಡುಕಿ ಬರೆಯಿರಿ** TB 40

ಪಠ್ಯ ಪುಸ್ತಕದಲ್ಲಿರುವ ಚಟುವಟಿಕೆಯನ್ನು ವೈಯಕ್ತಿಕವಾಗಿ ಬರೆದು ಮಂಡಿಸಲಿ.

**ಆಲ್ಬಂ ತಯಾರಿಸಿರಿ** TB 40

ಮಕ್ಕಳಲ್ಲಿ ವಿವಿಧ ಹಬ್ಬಗಳಿಗೆ ಸಂಬಂಧಿಸಿದ ಚಿತ್ರಗಳನ್ನು ಸಂಗ್ರಹಿಸಿ ಆಲ್ಬಂ ತಯಾರಿಸಲಿ.

ಹಾಡಿರಿ.

ಪಠ್ಯ ಪುಸ್ತಕದಲ್ಲಿರುವ ಪದ್ಯವನ್ನು ರಾಗವಾಗಿ ಹಾಡಲಿ.

**ಬಣ್ಣ ಹಚ್ಚಿರಿ** TB 42

ಪಠ್ಯ ಪುಸ್ತಕದಲ್ಲಿರುವ ಚಿತ್ರಕ್ಕೆ ಬಣ್ಣ ಹಚ್ಚಲಿ.

## ಪಾಠ ಭಾಗದೆಡೆಗೆ

ಪಾಠ ಭಾಗದ ಚಿತ್ರದ ಕುರಿತು ಆಶಯ ವಿನಿಮಯ ನಡೆಸುವುದು.

ಈ ಚಿತ್ರದಲ್ಲಿರುವವರನ್ನು ಪರಿಚಯ ಇದೆಯೇ

ಆಶಯ ಗ್ರಹಣ ಪ್ರಶ್ನೆಗಳನ್ನು ಕೇಳುವುದು.

ಗುಂಪಿನಲ್ಲಿ ಓದುವುದು.

ಗಟ್ಟಿ ಓದು

ಅಧ್ಯಾಪಕರ ಮಾದರಿ ಓದು

ಓದಿಗೆ ಸಂಬಂಧಿಸಿ ಚಟುವಟಿಕೆಗಳನ್ನು ನಡೆಸುವುದು

ನವೀನ ಪದಗಳನ್ನು ಪಟ್ಟಿ ಮಾಡುವುದು

ಒತ್ತಕ್ಷರ / ಅನುಸ್ವಾರ ಪದಗಳನ್ನು ಹುಡುಕಿ ಬರೆಯುವುದು

**ಉತ್ತರಿಸಿರಿ** TB 44

ಈ ಚಟುವಟಿಕೆಯನ್ನು ಮಕ್ಕಳು ವೈಯಕ್ತಿಕವಾಗಿ ಮಾಡಿ ಮಂಡಿಸಲಿ.

ಗುಂಪಿನಲ್ಲಿ ಉತ್ತಮಪಡಿಸಿ ಬರೆಯಲಿ.

**ಸರಿಯಾದ ಪದವನ್ನು ಆರಿಸಿ ಬರೆಯಿರಿ** TB 44

ಈ ಚಟುವಟಿಕೆಯನ್ನು ಮಕ್ಕಳು ವೈಯಕ್ತಿಕವಾಗಿ ಮಾಡಿ ಮಂಡಿಸಲಿ.

**ಪದ ಸಂಕೋಲೆ** TB 44

ಮಕ್ಕಳಲ್ಲಿ ಅಧ್ಯಾಪಕರು ಆಮಂತ್ರಣ ಪತ್ರಿಕೆ ನೋಡಿದ್ದೀರಾ ಎಂದು ಪ್ರಶ್ನಿಸುವುದು. ಮಕ್ಕಳಲ್ಲಿ ಇದರ ಚೌಕಟ್ಟಿನ ಬಗ್ಗೆ ಚರ್ಚಿಸುವುದು. ಬಳಿಕ ಪಠ್ಯ ಪುಸ್ತಕದಲ್ಲಿರುವ ಚಟುವಟಿಕೆಯನ್ನು ವೈಯಕ್ತಿಕವಾಗಿ ಮಾಡಿ ಮಂಡಿಸಲಿ.

## ಆಮಂತ್ರಣ ಪತ್ರಿಕೆ

**ಸರಕಾರಿ ಕಿರಿಯಿ ಪ್ರಾಥಮಿಕ ಶಾಲೆ ತುಮಕೇರಿ**

**ಓಣಂ ಆಚರಣೆ**

ಮಾನ್ಯರೇ,

ಸರಕಾರಿ ಕಿರಿಯಿ ಪ್ರಾಥಮಿಕ ಶಾಲೆ ತುಮಕೇರಿಯಲ್ಲಿ

ಓಣಂ ಆಚರಣೆಯನ್ನು ದಿನಾಂಕ 29-08-2023 ನೇ ಮಂಗಳವಾರ ವಿವಿಧ ಕಾರ್ಯಕ್ರಮಗಳೊಂದಿಗೆ ನಡೆಯಲಿರುವುದು.

ಇತಿ,

ಮುಖ್ಯೋಪಾಧ್ಯಾಯರು

ದಿನಾಂಕ

ಸರಕಾರಿ ಕಿರಿಯಿ ಪ್ರಾಥಮಿಕ ಶಾಲೆ

ತುಮಕೇರಿ

ಆಮಂತ್ರಣ ಪತ್ರಿಕೆಯ ಚೌಕಟ್ಟನ್ನು ಪಾಲಿಸಿಕೊಂಡು ಮಕ್ಕಳು ವೈಯಕ್ತಿಕವಾಗಿ ಪತ್ರ ಬರೆದು ಮಂಡಿಸಲಿ. ಗುಂಪಿನಲ್ಲಿ ಉತ್ತಮಪಡಿಸಿ ಮಂಡಿಸಲಿ . ಬಳಿಕ ಅಧ್ಯಾಪಕರ ಮಾದರಿ ಮಂಡಿಸಲಿ.

**ಪದ್ಯ ಹಾಡಿರಿ** TB 45

ಪದ್ಯವನ್ನು ವೈಯಕ್ತಿಕವಾಗಿ ರಾಗವಾಗಿ ಹಾಡಲಿ

**ಮುಖವಾಡ ನಿರ್ಮಾಣ**

ಯಕ್ಷಗಾನಕ್ಕೆ ಸಂಬಂಧಿಸಿದ ಚಿತ್ರಗಳನ್ನು ಮಕ್ಕಳಲ್ಲಿ ಕತ್ತರಿಸಿ ಚಾರ್ಟಿಗೆ ಅಂಟಿಸಿ ಮುಖವಾಡ ನಿರ್ಮಿಸುವುದು. ಬಳಿಕ ತರಗತಿಯಲ್ಲಿ ಅಭಿನಯಿಸುವುದು.

**ಚಿತ್ರ ಪ್ರದರ್ಶನ**

ಯಕ್ಷಗಾನಕ್ಕೆ ಸಂಬಂಧಿಸಿದ ಚಿತ್ರಗಳನ್ನು ಸಂಗ್ರಹಿಸಿ ಶಾಲೆಯಲ್ಲಿ ಒಂದು ಚಿತ್ರಪ್ರದರ್ಶನ ಏರ್ಪಡಿಸುವುದು.

**ಹೆಚ್ಚಿನ ಓದಿಗೆ**

# ಓಣಂ

ಓಣಂ ಹಬ್ಬವನ್ನು ಸಿಂಹ ಮಾಸದ ಹಸ್ತ ನಕ್ಷತ್ರದಿಂದ ಆರಂಭಿಸಿ ಹತ್ತು ದಿನಗಳ ಕಾಲ ಈ ಹಬ್ಬವನ್ನು ಆಚರಿಸುತ್ತಾರೆ. ನಾಡೆಲ್ಲಿ ಪೂವಲಿಯನ್ನು ರಚಿಸುವುದು ಈ ಹಬ್ಬದ ಪ್ರಧಾನ ಆಕರ್ಷಣೆ ಆಗಿದೆ. ಓಣಂ ಹಬ್ಬಕ್ಕೆ ಪೌರಾಣಿಕ ಹಿನ್ನೆಲೆ ಇದೆ. ಹಿಂದೆ ಕೇರಳ ರಾಜ್ಯವನ್ನು ಮಹಾಬಲಿ ಎಂಬ ಅರಸನು ಆಳುತ್ತಿದ್ದನು. ಅವನು ಅತ್ಯಂತ ಜನಪ್ರಿಯ ದೊರೆಯಾಗಿದ್ದನು.ಅವನು ಸ್ವರ್ಗಕ್ಕೆ ತನ್ನ ಅಧಿಕಾರವನ್ನು ವಿಸ್ತರಿಸುವ ಕೆಟ್ಟ ಆಲೋಚನೆಯನ್ನು ಮಾಡಿದನು. ಅವನ ಗರ್ವವನ್ನು ಇಳಿಸಲು ಮಹಾವಿಷ್ಣುವು ವಾಮಾನಾವಾತಾರವನ್ನು ತಾಳಿದನು. ವಾಮನನು ಮಹಾಬಲಿಯ ಬಳಿಗೆ ಬಂದು ತಪಸ್ಸು ಮಾಡುವುದಕ್ಕಾಗಿ ಮೂರೂ ಹೆಜ್ಜೆಯಷ್ಟು ಸ್ಥಳವನ್ನು ಬೇಡಿದನು. ಮಹಾಬಲಿಯಿಂದ ಒಪ್ಪಿಗೆ ಸಿಕ್ಕಿದ ಕೂಡಲೇ ಬೃಹದಾಕಾರ ವನ್ನು ತಾಳಿದನು. ಒಂದು ಹೆಜ್ಜೆಯಿಂದ ಭೂಮಿಯನ್ನು ಆವರಿಸಿದನು. ಇನ್ನೊಂದು ಹೆಜ್ಜೆಯಿಂದ ಆಕಾಶವನ್ನೆಲ್ಲ ಅಳೆದನು. ""ಮೂರನೆಯ ಹೆಜ್ಜೆಯನ್ನು ಎಲ್ಲಿ ಇಡಲಿ'' ಎಂದು ಕೇಳಿದನು. ತನ್ನ ತಪ್ಪಿನ ಅರಿವಾದ ಮಹಾಬಲಿಯು "ನನ್ನ ತಲೆಯ ಮೇಲೆ ಇಡಿರಿ' ಎಂದನು. ವಾಮನನು ಮೂರನೆಯ ಹೆಜ್ಜೆಯನ್ನು ಅವನ ತಲೆಯ ಮೇಲಿಟ್ಟು ಪಾತಾಳಕ್ಕೆ ತಳ್ಳಿದನು . ಆದರೆ ವರ್ಷಕೊಮ್ಮೆ ತನ್ನ ಪ್ರಜೆಗಳನ್ನು ಕಾಣಲು ಚಕ್ರವರ್ತಿಗೆ ಅವಕಾಶ ಮಾಡಿಕೊಟ್ಟನು. ಓಣಂ ಹಬ್ಬದ ಸಮಯದಲ್ಲಿ ಮಹಾಬಲಿಯು ತಮ್ಮನಾಡಿಗೆ ಬರುತ್ತಾನೆ ಎಂಬುದು ಕೇರಳೀಯರ ನಂಬಿಕೆ.

ತಿರುವೋಣಂ ಎಂದು ಕರೆಯುವ ಸಿಂಹ ಮಾಸದ ಶ್ರಾವಣ ನಕ್ಷತ್ರದ ದಿನದಂದು ಈ ಹಬ್ಬದ ಪ್ರಧಾನ ಕಾರ್ಯಕ್ರಮ ನಡೆಯುತ್ತದೆ. ಎಲ್ಲರೂ ಹೊಸ ಉಡುಪುಗಳನ್ನು ಧರಿಸುತ್ತಾರೆ. ಮನೆಮನೆಗಳಲ್ಲಿ ಓಣಂ ಸದ್ಯ ಎಂಬ ಭೂರಿ ಭೋಜನ ಇರುತ್ತದೆ. ಆನಂತರ ಹೆಂಗಸರು ಮಕ್ಕಳು ಉಯ್ಯಾಲೆ ಆಡುತ್ತಾರೆ. ಜಾತಿ ಮತ ಭೇದವಿಲ್ಲದೆ ಜನರೆಲ್ಲ ಹಾಡು ಕುಣಿತ ಹಾಗೂ ಆಟಗಳಲ್ಲಿ ಪಾಲ್ಗೊಳ್ಳುತ್ತಾರೆ. ಉತ್ತರಾಭದ್ರೆ ನಕ್ಷತ್ರದಂದು ಆರನ್ಮುಳ ಎಂಬಲ್ಲಿ ನಡೆಯುವ ದೋಣಿ ಸ್ಪರ್ಧೆಯನ್ನು ಸಹಸ್ರಾರು ಮಂದಿ ವೀಕ್ಷಿಸಿ ಆನಂದಿಸುತ್ತಾರೆ. ಕೇರಳದ ನಾಡಹಬ್ಬವಾಗಿ ಎಲ್ಲ ಜಾತಿ, ಮತ , ಪಂಗಡದವರು ಆಚರಿಸುವ ಓಣಂ ಹಬ್ಬ ಸಮೃದ್ಧಿಯ ಸಂಕೇತವಾಗಿದೆ.